<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ</u>

<u>ಸಿಸಿ ನಂ.***287/2017***</u>

ಚಾಸಾ-11 ಫ್ರಾಸಾ-06

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 31.01.2025

| | | |
|---|---|---|
| ಹೆಸರು | : | ಅಂಬಿಕಾ |
| ಗಂಡನ ಹೆಸರು | : | ಕಾಶಿನಾಥ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಸರಸಂಬಾ ತಾ ಆಳಂದ |

-: <u>ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-</u>

ಚಾಸಾ-1 ನನ್ನ ತಮ್ಮ, ಚಾಸಾ-6 ರವರ ಪರಿಚಯ ಇರುವುದಿಲ್ಲಾ, ಚಾಸಾ-7 ರಿಂದ 10 ರವರ ಪರಿಚಯ ಇರುತ್ತಾರೆ. ಮೃತ ಕಸ್ತೂರಿಬಾಯಿ ನನ್ನ ಅತ್ತೆ ಇರುತ್ತಾಳೆ.

ಈಗ ಸುಮಾರು 8 ವರ್ಷಗಳ ಹಿಂದೆ ಬೆಳಗೆ 11.00 ಗಂಟೆಗೆ ಹೈದ್ರಾ ಗ್ರಾಮಕ್ಕೆ ಹೋಗುತ್ತಿರುವಾಗ ರಸ್ತೆಯ ಪಕ್ಕದಲ್ಲಿ ನಿಂತಿದ್ದಾಗ ಲಾರಿ ಚಾಲಕನು ಅತಿವೇಗ ಮತ್ತು ನಿಶ್ಕಾಳಜಿ ತನದಿಂದ ಲಾರಿಯನ್ನು ಚಲಾಯಿಸಿಕೊಂಡು ಬಂದು ನಮ್ಮ ಅತ್ತೆಗೆ ಡಿಕ್ಕಿ ಪಡಿಸಿ ಅಪಘಾತ ಪಡಿಸಿರುತ್ತಾನೆ. ತದ ನಂತರ ನಮ್ಮ ಅತ್ತೆಯವರನ್ನು ಆಸ್ಪತ್ರೆಗೆ ಅಂತಾ ಅಕ್ಕಲಕೋಟ್‌ಗೆ ತೆಗೆದುಕೊಂಡು ಹೋಗುತ್ತಿರುವಾಗ ಮಾರ್ಗಮಧ್ಯ ತೀರಿಕೊಂಡಿರುತ್ತಾರೆ. ಚಾಸಾ-1 ರವರು ಸೈಫನ ಎನ್ನುವ ಲಾರಿ ಚಾಲಕನು ಅಪಘಾತ ಪಡಿಸಿರುತ್ತಾನೆ ಅಂತಾ ತಿಳಿಸಿರುತ್ತಾನೆ. ತದ ನಂತರ ಚಾಸಾ-1 ರವರು ಅಪಘಾತ ಪಡಿಸಿದ ಲಾರಿಯನ್ನು ಪೋಲಿಸ ಠಾಣೆಗೆ ತೆಗೆದುಕೊಂಡು ಹೋಗಿ ನಿಲ್ಲಿಸಿರುತ್ತಾರೆ.

ಸಾಕ್ಷಿಗೆ ಅಪಘಾತಕ್ಕೆ ಒಳಗಾಯಿತು ಎಂದು ಹೇಳುವ ಮೋಟಾರ ಸೈಕಲ ಮತ್ತು ಲಾರಿಯ ಭಾವಚಿತ್ರಗಳನ್ನು ಸಾಕ್ಷಿಗೆ ತೋರಿಸಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-1 ರಿಂದ 8 ಎಂದು ಗುರುತಿಸಲಾಗಿರುತ್ತದೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ **PBP** ರವರ ಪರವಾಗಿ</u>
<u>ಶ್ರೀ **DSK** ವಕೀಲರಿಂದಃ-</u>

ಲಾರಿಯ ನೋಂದಣಿ ನಂಬರ ನನಗೆ ಹೇಳಲು ಬರುವುದಿಲ್ಲಾ. ಅಪಘಾತವಾದ ದಿನದಂದು ನಾನು ಆರೋಪಿಗೆ ನೋಡಿರುವುದಿಲ್ಲಾ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅತ್ತೆ ರಸ್ತೆ ಬಳಿ ನಿಂತಾಗ ಲಾರಿ ಚಾಲಕನು ಅಪಘಾತ ಪಡಿಸಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆಎಂದರೆ ಸರಿಯಲ್ಲ. ಆರೋಪಿಯ ಹೆಸರು ನನಗೆ ಗೊತ್ತಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನನ್ನ ತಮ್ಮನಿಗೆ ಲಾರಿ ಚಲಾಲಿಸಲು ಬರುವುದಿಲ್ಲಾ ಎಂದರೆ ಸರಿ.

<u>ಮರು ವಿಚಾರಣೆಃ - ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ